ಅವುಗಳ ಸುವಾಸನೆ ಇನ್ನಿಲ್ಲದಂತೆ ನೆನಪಾಗಿ ದುಃಖ ಒತ್ತರಿಸಿ ಬಂದಿತ್ತು. ಮಠಕ್ಕೆ ಹೋದ ಮೇಲಂತೂ ಈ ಹಣ್ಣುಗಳದೇ ಕನಸು ನನಗೆ. ಕಡೆಗೆ ಶಾಲೆ ಬೇಕಾದರೆ ಬಿಟ್ಟೇನು ಈ ಹಣ್ಣುಗಳನ್ನು ಬಿಡಲಾರೆನೆಂದು ಒಂದೆ ವಾರದಲ್ಲಿ ಊರಿಗೆ ಬಂದು ಬಿಟ್ಟೆ.

ಹದಕ್ಕೆ ಬಂದ ರಸಪುರಿ ಕಚ್ಚಿದ ಮರದಷ್ಟು ಮೋಹಕ ದೃಶ್ಯ ಬೇರೆ ಇಲ್ಲ. ಮಲ್ಲಿಕ, ಮಲಗೋಬ, ನೀಲಂ ಇವುಗಳು ಕಡು ಹಸಿರು ಬಣ್ಣದಿಂದ ತಿಳಿಹಸಿರಿಗೆ ತಿರುಗುತ್ತವೆ. ಆದರೆ, ರಸಪುರಿ, ಬಾದಾಮಿಗಳು ತಿಳಿ ಹಸಿರಿನಿಂದ ಕೆಂಪು, ತಿಳಿ ಹಸಿರು, ಕಂದು, ಹಳದಿ ಹೀಗೆ ಭಿನ್ನ ಭಿನ್ನ ವರ್ಣ ವೈಭವವನ್ನು ಮೆರೆಯುತ್ತವೆ. ಸೇಂದೂರ ಮುಂತಾದವು ಹುಟ್ಟುತ್ತಲೆ ಅರಮನೆ ರಾಜಕುಮಾರರ ಹಾಗೆ ಕಂಗೊಳಿಸುವ ಬಣ್ಣ ಹೊತ್ತೇ ಹುಟ್ಟುತ್ತವೆ. ತೋತಾಪುರಿ ಕಾಯನ್ನಷ್ಟೆ ತಿನ್ನಲು ಚೆಂದ. ತರುಣಿಯರ ಆಪ್ತ ಸುಖದ ಸಖ ಇದು. ಉಪ್ಪು ಖಾರದ ಜೊತೆ ತಿನ್ನುವ ಇವರು ಬೇಕಿದ್ದರೆ ನಳಿನಿ ದೇಶಪಾಂಡೆಯ ವೆಸ್ಪಾ ಸ್ಕೂಟರನ್ನೂ ಗುಜರಿಗೆಸೆಯಲು ಸಿದ್ಧ. ಕಸುಬುದಾರರು, ಅನುಭವಸ್ಥರು ಈ ಸೇಂದೂರ ಹಣ್ಣಿನ ತಳುಕು ಬಳುಕಿಗೆ ಮರುಳಾಗುವುದಿಲ್ಲ. ರಸಪುರಿ, ಬಾದಾಮಿಗಳೂ ಅಷ್ಟೆ ಬಿಸಿಲಿಗೆ ಮೈಯೊಡ್ಡಿದಷ್ಟೂ ಗಾಢ ಬಣ್ಣದ ಚೆಲುವು ಪಡೆಯುತ್ತವೆ. ಆದರೆ, ಎಲೆಮರೆಯಲ್ಲಿ ಕೂತ ಕಾಯಿ ಸರಿಯಾಗಿ ಮಾಗಿದರೆ ಅದರ ಸ್ವಾದವೇ ಬೇರೆ.

ಬಿಸಿಲಲ್ಲಿ ಮೆರೆದು ಕಂಗೊಳಿಸುವ ಕಾಯಿಗಳು ಬಹಳ ಬೇಗ ಗಿಳಿ, ಕಾಗೆ, ಅಳಿಲಿಗೆ ಮೈಯೊಡ್ಡುತ್ತವೆ. ತುಸು ಬೇಗ ಮೈನೆರೆಯುತ್ತವೆ. ಮಾವು ಮರದಲ್ಲಿ ಹಣ್ಣಾದಾಗ ತನ್ನ ತಳಭಾಗದಲ್ಲಿ ಸಣ್ಣಗೆ ಹಳದಿ ಬೊಟ್ಟನ್ನು ತೊಡುತ್ತವೆ. ಇದನ್ನು ಶಾಖ ಹೊಡೆದಿದೆ ಎನ್ನುತ್ತಿದ್ದೆವು. ಆ ಹಳದಿಯು ನಿಧಾನಕ್ಕೆ ಗೆರೆಯಾಗಿ ವಿಸ್ತರಿಸಿಕೊಳ್ಳುತ್ತದೆ. ಆ ನಂತರ ಪೂರ್ಣ ಮಾಗಲು ತೊಡಗುತ್ತದೆ. ಮರದಲ್ಲೆ ಪೂರ್ತಿ ಮಾಗಿದ ರಸಪುರಿ, ಸೇಂಧೂರ ಹಣ್ಣುಗಳು ಥೇಟ್ ಮುಗಿಲಲ್ಲಿ ಮೂಡಿದ ಕಾಮನಬಿಲ್ಲಿನಂತೆ ಕಾಣುತ್ತವೆ. ಎಲೆ ಮರೆಯೊಳಗೆ ಅವಿತ ಮಾವು ಹಣ್ಣಾಗತೊಡಗಿದರೆ ಅಲ್ಲಿಗೆ ಕಾಯಿ ಬಲಿತವು ಎಂದರ್ಥ. ಈಗಲೂ ನಾನು, ಎಲೆ ಮರೆಯೊಳಗೆ ಮಾಗಿದ ಹಣ್ಣಿನ ಸ್ವಾದಕ್ಕೆ ಜೀವವನ್ನೆ ಕೊಟ್ಟೇನೆಂದು ಶರಣಾಗುತ್ತೇನೆ. ಕಸುಬುದಾರನೊಬ್ಬ ಮಾವು ಬಲಿತಿವೆಯೊ ಇಲ್ಲವ್ರೊ ಎಂದು ತಿಳಿಯಲು ಕಷ್ಟ ಪಡಬೇಕಾಗಿಲ್ಲ. ಕಾಯಿಯ ನೆತ್ತಿಯಲ್ಲಿ ತೊಟ್ಟು ಕಚ್ಚಿದ ಕಡೆ ಸಣ್ಣದೊಂದು ತಗ್ಗು ಶುರುವಾಗುತ್ತದೆ. ಇಡೀ ದೇಹ ತುಂಬಿಕೊಳ್ಳುತ್ತದೆ. ತಗ್ಗಿನಲ್ಲಿ ಕೆಲವೊಮ್ಮೆ ಮೂರ್ನಾಲ್ಕು ತೊಟ್ಟು ನೀರು ನಿಲ್ಲಿಸಬಹುದು. ಆಗ ಮಾವು ಇಳಿಸಬಹುದೆಂದು ಅರ್ಥ.

ಸಾಮಾನ್ಯವಾಗಿ ಮರಗಳನ್ನು, ತೋಟ, ತೋಪುಗಳನ್ನು ಬಳ್ಳಾಪುರದ ಕಡೆಯ ಸಾಬರು ಚೇಣಿ ಹಿಡಿಯುತ್ತಾರೆ. ನಮ್ಮಲ್ಲಿ ಗಫಾರ್ ಎಂಬ ಸಾಬರು ಚೇಣಿ ಹಿಡಿಯುತ್ತಿದ್ದರು. ಅವರು ಸರ್ಕಾರಿ ಬಸ್ಸಿನ ಡ್ರೈವರೂ ಆಗಿದ್ದರು. ನಮಗೆಲ್ಲ ಬಸ್ ಪಾಸ್ ಮಾಡಿಸಿಕೊಡುತ್ತಿದ್ದವರಲ್ಲಿ ಅವರೂ ಒಬ್ಬರು. ನಾವು ಸಣ್ಣವರಾಗಿದ್ದಾಗ ಬೆಂಗಳೂರಿನ ಡಿಪೋದಲ್ಲೆ ಬಸ್ ಪಾಸು ಮಾಡಿಸಬೇಕಾಗಿತ್ತು. ಗಫಾರ್ ಸಾಬರು ಮತ್ತು ನಮ್ಮೂರಿನ ರಂಗಸ್ವಾಮಿ ಎಂಬ ಕಂಡಕ್ಟರು ಪಾಸು ಮಾಡಿಸಿ ಕೊಡುತ್ತಿದ್ದರು. ಡ್ರೈವರಾಗಿದ್ದಾಗ ಖಾಕಿ ಬಟ್ಟೆಯಲ್ಲಿರುತ್ತಿದ್ದ ಗಫಾರ್ ಸಾಬರು ಮಾವಿನ ತೋಪುಗಳ ವೀಕ್ಷಣೆಗೆ ಬಂದಾಗ ಬಣ್ಣ ಬಣ್ಣದ ಬಟ್ಟೆ ತೊಡುತ್ತಿದ್ದರು. ಪ್ಯಾಂಟು ಮಾತ್ರ ಖಾಕಿ ಬಣ್ಣದ್ದೆ ಆಗಿರುತ್ತಿತ್ತು. ಕೆಲವೊಮ್ಮೆ ನಮ್ಮ ಓರಗೆಯ ಅವರ ಮಕ್ಕಳನ್ನು ಕರೆತರುತ್ತಿದ್ದರು. ನಮ್ಮ ಮರಗಳನ್ನು ಕೊಳ್ಳುವಾಗ ಸಿಕ್ಕಾಪಟ್ಟೆ ಚೌಕಾಸಿ ಮಾಡಿ ಕೊಳ್ಳುತ್ತಿದ್ದರು. ಮಾರುವಾಗಿನ ಕಂಡೀಶನ್ನು ಮನೆ ಮಕ್ಕಳು ತಿನ್ನುವುದಕ್ಕೆಂದು ಇಂತಿಷ್ಟು ಕಾಯಿ, ಅಥವಾ ಒಂದು ಮರ ಹೀಗೆ ಬಿಡಬೇಕಾಗಿತ್ತು. ನಾನು ಮತ್ತು ನನ್ನ ತಮ್ಮ ಒಂದು ರಸಪುರಿ ಮತ್ತು ಒಂದು ಬಾದಾಮಿ ಮರವನ್ನು ನಮಗೆ ಉಳಿಸಿಕೊಳ್ಳಬೇಕೆಂದು ಹಠ ಮಾಡುತ್ತಿದ್ದೆವು. ಸಾಬ್ರು, ಮಕ್ಕಳ ಆಸೆ ಪ್ರಕಾರಾನೆ ಆಗ್ಲಿ ಎಂದು ಒಪ್ಪಿಗೆ ಸೂಚಿಸುತ್ತಿದ್ದರು. ಜನವರಿಯಲ್ಲಿ ಸುವಾಸನೆಯ ಹೂಗಳ ಮೇಲೆ ಕೆಟ್ಟ ಔಷಧ ಹೊಡೆಯುತ್ತಿದ್ದರು. ಇದು ಆರೋಗ್ಯ ತುಂಬಿ ತುಳುಕುವ ದೇಹದ ಮೇಲೆ ಆಸಿಡಿನ ಬೆಂಕಿ ಸುರಿದಂತೆ ಭಾಸವಾಗುತ್ತಿತ್ತು. ಹೂವಿನ ಮೇಲೆ ಕೂತ ಜೇನುಗಳು ಸತ್ತು ಬೀಳುತ್ತಿದ್ದವು. ತಲೆ ತಿರುಗಿ ಬಿದ್ದದ್ದ ನೊಣಗಳು ಹೂವಿನ ವಾಸನೆ ಕಡಿಮೆಯಾಗಿ ನಿಜದ ಮಕರಂಧ ಕೂಗಿ ಕರೆವವರೆಗೆ ತಿರುಗಿ ನೋಡದೆ ಬದುಕಿಕೊಳ್ಳುತ್ತಿದ್ದವು.

ಮರಗಳ ಕಾವಲು ನಮ್ಮದೇ ಆಗಿರುತ್ತಿತ್ತು.